ನೋಡುತ್ತಾ ನೋಡುತ್ತಾ ಅವಳಿಗೆ ಯಾಕೋ ನೆಮ್ಮದಿ ಅನ್ನಿಸಿತು. ಇದ್ದಬದ್ದ ಹೊರೆಯನ್ನೆಲ್ಲ ಅವಳ ಮೇಲೆ ಹಾಕಿ ಘೋಬಾಶಿ ಹೊರಟುಬಿಟ್ಟಿದ್ದ: ಮಕ್ಕಳು, ಎರಡು ಗುಂಟೆ ಜಮೀನು, ಕೋಣ... ಎಲ್ಲವನ್ನೂ. ಹೊರಡುವ ಹಿಂದಿನ ರಾತ್ರಿ 'ನೈಮಾನ ಚೆಂದಾಗಿ ನೋಡ್ಕ. ಮೊನ್ನೆಯಿನ್ನೂ ದೊಡ್ಡೋಳಾಗವಳೆ, ಅಲ್ವ?' ಅಂದಿದ್ದ. ಆಮೇಲೆ ಅಂಗೈಗಳನ್ನು ಅಗಲಿಸಿ 'ಓ ದೇವರೇ, ಪ್ರವಾದಿಗಳ ದಯದಿಂದ ನಾನು ಊರಿಗೆ ವಾಪಸ್ ಬರುವಾಗ ಅವಳಿಗೆ ಅಪ್ಪಟ ರೇಶ್ಮೆಯ ಮದುವೆ ಡ್ರೆಸ್ಸು ತರುವಂತಾಗಲಪ್ಪ' ಅಂದ.

'ನಿನ್ನ ಮಾತು ಸೀದಾ ನಿನ್ನ ತುಟಿಯಿಂದ ಸ್ವರ್ಗದ ಬಾಗಿಲು ತಲುಪಲಿ ಘೋಬಾಶಿ' ಎಂದಿದ್ದಳು ಝೀನತ್. ಮುಂದಿನ ದೊಡ್ಡ ಹಬ್ಬದ ಹೊತ್ತಿಗೆ ಅವನು ವಾಪಸು ಬರುತ್ತಾನೆ. ಅವನು ಬಂದು ಇಲ್ಲಿ ಆಗಿರೋದನ್ನು ನೋಡಿದರೆ ಏನಾಗುತ್ತೋ ಏನೋ? ಝೀನತ್ ಎರಡೂ ಕೈಯನ್ನು ತಲೆಯ ಆ ಕಡೆ ಈ ಕಡೆ ಇಟ್ಟುಕೊಂಡು, ತುಸು ಬಗ್ಗಿ ಬೂದಿಯನ್ನು ಉಫ್ ಉಫ್ ಅಂದಳು. 'ಈ ಕಾಲದ ಹುಡುಗೀರು ಎಷ್ಟು ವಿಚಿತ್ರನಪ್ಪ! ಈ ಕಳ್ಳಲೌಡಿ ಏನೂ ಆಗಿಲ್ಲ ಅನ್ನೋ ಹಂಗೆ ಪ್ರತಿ ತಿಂಗಳೂ ಮುಟ್ಟಿನ ಸಮಯದಲ್ಲಿ ಬಟ್ಟೆ ಒಣಾಕ್ತಾ ಇರೋಳು. ನೋಡಿದರೆ, ಆಗಲೇ ನಾಕು ತಿಂಗಳು; ಏನೂ ಕಾಣ್ತಾ ಇಲ್ಲ.'

ನೈಮಾ ಒಳಬಂದು ಮೊಟ್ಟೆಯ ಗಂಟು ಬಿಚ್ಚಿ, ಎರಡು ಮೊಟ್ಟೆ ತೆಗೆದು ಕೆಂಡದೊಳಗಿಟ್ಟು ಉಳಿದವನ್ನು ಪಾತ್ರೆಯಲ್ಲಿ ಹಾಕಿಟ್ಟಳು. ಎರಡು ಲೋಟ, ಸಕ್ಕರೆ ಡಬ್ಬಿ ತಂದು ಅವ್ವನ ಪಕ್ಕ ಕೂತಳು. ಅವ್ವ, ಅವಳ ಚಿಂತೆಯಲ್ಲಿ ಅವಳು ಮುಳುಗಿದ್ದಳು.

'ಏನಾರೂ ದಾರಿ ನೋಡಿಕೊಳ್ಳಲಿಲ್ವಾ?'

ನೈಮಾ ಏನೂ ಕೈಲಾಗದವಳಂತೆ ಭುಜ ಉಬ್ಬಿಸಿದಳು.

'ನಿಮ್ಮಪ್ಪ ಹೋಗಿ ನಾಕು ತಿಂಗಳಾತು. ಇನ್ನೂ ಟೈಮಿದೆ ಅಲ್ವಾ?'

